ಹೆಣ್ಣು ಮತ್ತು ಗಂಡು Amur Falcon ಜೋಡಿ







ನಾಗಾಲ್ಯಾಂಡ್ ಮತ್ತು ಮಣಿಪುರದಲ್ಲಿ ಅಕ್ಟೋಬರ್ ತಿಂಗಳಲ್ಲಿ ಪ್ರತೀ ವರ್ಷ ತಂಗುತ್ತವೆ. ಪ್ರಪಂಚದಲ್ಲಿಯೇ ಅತಿ ಹೆಚ್ಚು ಒಂದೇ ಜಾತಿಯ ವಲಸೆ ಹಕ್ಕಿಗಳು ಬಂದು ಸೇರುವ ಜಾಗ ನಾಗಾಲ್ಯಾಂಡ್‌ನ ಡೊಯಂಗ್ ಜಲಾನಯನ ಪ್ರದೇಶ. ಒಂದೇ ಗುಂಪಿನಲ್ಲಿ ಹನ್ನೆರಡು ಸಾವಿರದಿಂದ ಹದಿನಾಲ್ಕು ಸಾವಿರ ಹಕ್ಕಿಗಳನ್ನು ಇಲ್ಲಿ ನೋಡಬಹುದು.

ನಾಗಾಲ್ಯಾಂಡ್ ಮತ್ತು ಮಣಿಪುರದ ಜನತೆಯ ಹವ್ಯಾಸ ಪಕ್ಷಿಪ್ರಾಣಿಗಳ ಶಿಕಾರಿ. ಲಕ್ಷ ಸಂಖ್ಯೆಯಲ್ಲಿ ವಲಸೆ ಬರುವ ಅಮೂರ್ ಫಾಲ್ಕನ್ ಹಕ್ಕಿಯನ್ನು ಶಿಕಾರಿ ಮಾಡಿ ಮಾರುಕಟ್ಟೆಯಲ್ಲಿ ಕೇವಲ10–20 ರೂಪಾಯಿಗೊಂದರಂತೆ ಮಾರಾಟ ಮಾಡುತ್ತಾರೆ. ಆದರೆ ಹೊರ ಜಗತ್ತಿಗೆ ಇದರ ಬಗ್ಗೆ ಮಾಹಿತಿಯೇ ಇಲ್ಲ. ದಿನ ಒಂದಕ್ಕೆ ಸಾವಿರಾರು ಹಕ್ಕಿಗಳ ಮಾರಾಟ ನಡೆಯುವ ಸುದ್ದಿ ಇಡೀ ಜಗತ್ತಿಗೆ ಆಘಾತಕಾರಿಯಾಗಿತ್ತು. ಇಲ್ಲಿನ ಬುಡಕಟ್ಟು ಜನತೆಯ ಆಹಾರ ಪದ್ಧತಿಯಲ್ಲಿ ಕಟ್ಟುಪಾಡುಗಳಿಲ್ಲ ಎಂದು ಮಿತ್ರ ಕಾರ್ತಿಕ್ ಹೇಳಿದ್ದು ನೆನಪಾಯಿತು. ಇಲ್ಲಿನವರ ನಿಷ್ಕಲ್ಮಶ ಹೃದಯಕ್ಕೆ ಮಾರುಹೋದ ಕಾರ್ತಿಕ್ ಇದೇ ಪ್ರದೇಶದ ಕನ್ಯೆಯನ್ನು ವರಿಸಿ ಬೆಂಗಳೂರಿನ ಹಲಸೂರಿನಲ್ಲಿ ನೆಲೆಸಿದ್ದಾರೆ.

2012 ರಲ್ಲಿ ಕನ್ಸ್‌ರ್ವೇಶನ್ ಇಂಡಿಯಾ ಎಂಬ ಸರ್ಕಾರೇತರ ಸಂಸ್ಥೆ ಈ ಹಕ್ಕಿಗಳನ್ನು ಕಾನೂನಾತ್ಮಕವಾಗಿ ಮತ್ತು ಅಕ್ರಮವಾಗಿ ಶಿಕಾರಿ ಮಾಡುವ, ಮಾರುಕಟ್ಟೆಯಲ್ಲಿ ಅಕ್ರಮ ವಹಿವಾಟು ನಡೆಸುವ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅರಿವು ಮೂಡಿಸಿದ್ದಾರೆ. ಗ್ರಾಮೀಣ ಭಾಗದಲ್ಲಿ ನಾಗಾಲ್ಯಾಂಡ್ ಸರ್ಕಾರ, ಎನ್‌ಜಿಓ, ಅರಣ್ಯ ಇಲಾಖೆ, ಬಿಎನ್‌ಎಚ್‌ಎಸ್ ಮತ್ತಿತರರ ಸಹಕಾರದಿಂದ ಈ ಹಕ್ಕಿಗಳ ಸಂರಕ್ಷಣೆಯಲ್ಲಿ ಯಶಸ್ವಿಯಾಗಿದ್ದಾರೆ. ಇದರ ಪರಿಣಾಮವಾಗಿ ಈ ಹಕ್ಕಿಗಳನ್ನು ಬುಡಕಟ್ಟು ಜನ ರಾಜ್ಯದ ವಿಶೇಷ ಅತಿಥಿಗಳು ಎಂದು ಪರಿಗಣಿಸುತ್ತಾರೆ. ಈ ಹಕ್ಕಿಗಳು ಬೆಳೆಯನ್ನು ತಿನ್ನುವ ಕೀಟಗಳನ್ನು ಸಾಮೂಹಿಕವಾಗಿ ಮುಕ್ಕುತ್ತವೆ. ಆ ಮೂಲಕ ರೈತರ ಮಿತ್ರನಂತೆಯೂ ಕಾರ್ಯನಿರ್ವಹಿಸುತ್ತವೆ. ಈ ಹಕ್ಕಿಗಳ ಮಹತ್ವ ಅರಿತ ರೈತರು ಪ್ರತಿವರ್ಷ ಅಕ್ಟೋಬರ್ 25 ರಂದು 'ಅಮೂರ್ ಫಾಲ್ಕನ್' ನೃತ್ಯ ಹಬ್ಬವನ್ನು ಏರ್ಪಡಿಸುತ್ತಾರೆ. ಅದರೊಂದಿಗೆ ಸೌಂದರ್ಯ ಸ್ಪರ್ಧೆಯನ್ನು ಹಮ್ಮಿಕೊಂಡು ಖುಷಿಪಡುತ್ತಾರೆ.

ಈ ಹಕ್ಕಿಗಳು ಕಾರವಾರಕ್ಕೆ ನವೆಂಬರ್–ಡಿಸೆಂಬರ್ ತಿಂಗಳಲ್ಲಿ ಆಗಮಿಸಿ ಬೇಸಿಗೆ ಶುರುವಾಗುವ ಹೊತ್ತಿಗೆ ಕಾಣೆಯಾಗುತ್ತವೆ. ಕೀಟ ಭಕ್ಷಕ ಎಂದೇ ಹೆಸರಾದ ಈ ಹಕ್ಕಿಗಳು ಸದಾ ಹಾರಾಡುತ್ತಲೇ ರೆಕ್ಕೆ ಬಡಿಯದೆ ನಿಂತಲ್ಲೆ ನಿಂತು, ಬಯಲಲ್ಲಿ ಬೇಟೆ ಅರಸಿ ಕ್ಷಿಪ್ರ ಮೇಲೆರಗುತ್ತವೆ. ನೆಲದಲ್ಲಿ ಸಿಕ್ಕ ಕೀಟ, ಸಣ್ಣ ಇಲಿ ಹೆಗ್ಗಣಗಳನ್ನು ಕಾಲಲ್ಲಿ ಹಿಡಿದು ಮೇಲೆ ಹಾರಿಕೊಂಡೇ ತಿನ್ನುವ ಇವುಗಳ ಸ್ವಭಾವ ನೋಡುಗರಿಗೆ ಅಚ್ಚರಿ ಮೂಡಿಸುತ್ತದೆ.

ಪಾರಿವಾಳಕ್ಕಿಂತ ತುಸು ದೊಡ್ಡದಾದ ಈ ಹಕ್ಕಿಯ ಮೇಲ್ಮೈ ಮತ್ತು ಕೆಳಮೈ ಬೂದುಗಪ್ಪು ಬಣ್ಣದ್ದಾಗಿದ್ದರೆ ಅದು ಗಂಡು. ಆದರೆ ಹೆಣ್ಣು ಹಕ್ಕಿಗೆ ಬೂದು ಬಣ್ಣದ ಮೇಲ್ಮೈ, ತಿಳಿ ಬಿಳಿಯ ಕೆಳಮೈ, ಬಾಲದಲ್ಲಿ ಅಡ್ಡಗೀರುಗಳ ಪಟ್ಟಿ ಮತ್ತು ಎದೆಯಲ್ಲಿ ಎಲೆ ಆಕಾರದ ಲವ್ ಚಿನ್ಹೆ ಇರುತ್ತದೆ. ವಯಸ್ಕ ಹಕ್ಕಿಯ ಕಾಲು ಕೆಂಪಗಿರುತ್ತದೆ.